6. ಪ್ರಶ್ನೋತ್ತರಗಳು

(ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು

ವಿಷಯ: ಸುಳ್ಳು ಜಾತಿ ಪ್ರಮಾಣ ಪತ್ರ ನೀಡಿ ಸರ್ಕಾರಿ ಸೇವೆಗೆ ಸೇರಿರುವುದು.

516 (5870) : ಶ್ರೀ ಈಶ್ವರಪ್ಪ ಕೆ.ಎಸ್. (ಶಿವಮೊಗ್ಗ): ಸಮಾಜ ಕಲ್ಯಾಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ನಾಯಕ (ಪರಿವಾರ) ಜನಾಂಗ, ಪರಿಶಿಷ್ಟ ಜನಾಂಗಕ್ಕೆ ಸೇರದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಸೇರದೇ ಇದ್ದಲ್ಲಿ ಯಾವ ಪ್ರವರ್ಗಕ್ಕೆ ಸೇರುತ್ತದೆ;

ಇ) ಸುಳ್ಳು ಜಾತಿ ಪತ್ರ ನೀಡಿ ಸರ್ಕಾರಿ ಸೇವೆಗೆ ನೇಮಕ, ಬಡ್ತಿ, ಪಡೆದವರ ಮೇಲೆ ಏನು ಕ್ರಮ ಕೈಗೊಳ್ಳಲಾಗಿದೆ?

ಡಾ. ವೈ. ನಾಗಪ್ಪ (ಮಾನ್ಯ ಸಮಾಜ ಕಲ್ಯಾಣ ಸಚಿವರು) :

ಅ) ಹೌದು.

ಆ) ಸರ್ಕಾರಿ ಆದೇಶ ಸಂಖ್ಯೆ: ಸಕಇ 225 ಬಿಸಿಎ 2000, ದಿ: 30–03–2002 ರಲ್ಲಿ ಪರಿವಾರ ಪರಿವಾರನಾಯಕ ಜಾತಿಗಳು ಹಿಂದುಳಿದ ವರ್ಗಗಳ ಪ್ರವರ್ಗ–1 ರಲ್ಲಿ ಸೇರಿರುತ್ತವೆ.

ಸರ್ಕಾರಿ ಆದೇಶ ಸಂಖ್ಯೆ: SWD 713 SAD 93 ದಿನಾಂಕ: 11–3–2002 ರ ಪ್ರಕಾರ ಪರಿವಾರ, ತಳವಾರ, ಮಾಲೇರು, ಕುರುಬ, ಬೆಸ್ತ ಮತ್ತು ಕೋಲಿ ಜನಾಂಗದವರು ಪರಿಶಿಷ್ಟ ವರ್ಗದ ಪ್ರಮಾಣ ಪತ್ರ ಪಡೆದು ಉದ್ಯೋಗಕ್ಕೆ ಸೇರಿಕೊಂಡು ದೀರ್ಘಕಾಲ ಸೇವೆಯಲ್ಲಿದ್ದಲ್ಲಿ ಅಂತಹ ಪ್ರಕರಣಗಳಿಗೆ ಜಾತಿ ಪ್ರಮಾಣ ಪತ್ರ ರದ್ದು ಮಾಡಿ ಇನ್ನು ಮುಂದೆ (ಆದೇಶದ ದಿನಾಂಕದಿಂದ) ಅವರಿಗೆ ಸಾಮಾನ್ಯ ವರ್ಗ ಎಂದು ಪರಿಗಣಿಸಲು ತಿಳಿಸಿವೆ. ಹಾಗೂ ಅವರುಗಳ ಮಕ್ಕಳಿಗೆ ಪರಿಶಿಷ್ಟ ವರ್ಗದ ಸೌಲಭ್ಯವನ್ನು ರದ್ದುಪಡಿಸಲು ಸಹ ಆದೇಶಿಸಿದೆ. ಇಂತಹ ಪ್ರಕರಣಗಳಲ್ಲಿ ಶಿಸ್ತಿನ ಕ್ರಮ ತೆಗೆದುಕೊಳ್ಳಲಾಗುವುದಿಲ್ಲ. ಉಲ್ಲೇಖಿತ ಆದೇಶ ಷರತ್ತುಗಳು ಅನ್ವಯವಾಗದೆ ಇರುವ ಜನಾಂಗದವರು ಸುಳ್ಳು ಜಾತಿ ಪ್ರಮಾಣ ಪತ್ರ ತೆಗೆದುಕೊಂಡಲ್ಲಿ ಅಂತಹವರ ವಿರುದ್ಧ ಕರ್ನಾಟಕ ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳ ಮತ್ತು ಇತರೆ ಹಿಂದುಳಿದ ವರ್ಗಗಳ (ನೇಮಕಾತಿ ಮುಂತಾದವುಗಳ ಮೀಸಲಾತಿ) (ತಿದ್ದುಪಡಿ) ನಿಯಮಗಳು 2000 ದ ನಿಯಮ 7 ಎ ಮತ್ತು ಬಿ ರನ್ವಯ ಜಾತಿ ಪ್ರಮಾಣ ಪತ್ರ ಪಡೆದು ಸರ್ಕಾರಿ ಸೇವೆಗೆ ನೇಮಕಗೊಂಡ ಪ್ರಕರಣಗಳಲ್ಲಿ ಜಾತಿ ಪ್ರಮಾಣ ಪತ್ರ ಸುಳ್ಳು ಎಂದು ಕಂಡುಬಂದಲ್ಲಿ ಅಂತಹ ನೇಮಕಾತಿಗಳನ್ನು ರದ್ದು ಮಾಡಲಾಗುವುದು ಮತ್ತು ಪ್ರಕರಣವನ್ನು ನಾಗರೀಕ ಹಕ್ಕು ಜಾರಿ ನಿರ್ದೇಶನಾಲಯಕ್ಕೆ ಮುಂದಿನ ಕಾನೂನು ಕ್ರಮಕ್ಕಾಗಿ ಕಳುಹಿಸಲಾಗುವುದು. ಮುಂಬಡ್ತಿ ಪ್ರಕರಣಗಳಲ್ಲಿ ಮುಂಬಡ್ತಿಯನ್ನು ರದ್ದುಗೊಳಿಸಲಾಗುವುದು. ತನಿಖೆಯಿಂದ ತಪ್ಪಿತಸ್ಥರೆಂದು ಕಂಡು ಬಂದಲ್ಲಿ ಕ್ರಿಮಿನಲ್ ಮೊಕದ್ದಮೆ ದಾಖಲು ಮಾಡಲಾಗುವುದು.

(5870) ಶ್ರೀ ಗೋವಿಂದ ಕಾರಜೋಳ : ಮಾನ್ಯ ಈಶ್ವರಪ್ಪನವರ ಪರವಾಗಿ ಕೇಳುತ್ತೇನೆ. ನಾಯಕ ಜನಾಂಗದ ಪರಿವಾರದವರನ್ನು ಪ್ರವರ್ಗ Iರಲ್ಲಿ ಸೇರಿಸಲಾಗಿದೆ ಎಂದು ಉತ್ತರ ಕೊಟ್ಟಿದ್ದಾರೆ. ಅದಕ್ಕೆ ನಾನು ಸರ್ಕಾರಕ್ಕೆ ಏನು ಒತ್ತಾಯ ಮಾಡುತ್ತೇನೆ ಅಂದರೆ ಜನಾಂಗದವರನ್ನು ಪರಿಶಿಷ್ಟ ಜಾತಿಗೆ ಸೇರಿಸುವುದಕ್ಕೆ ಸರ್ಕಾರ ಏನು ಕ್ರಮ ತೆಗೆದುಕೊಳ್ಳುತ್ತದೆ ಅಂತ ನಿರ್ದಿಷ್ಟವಾಗಿ ಹೇಳಬೇಕಾಗುತ್ತದೆ.

ಡಾ. ವೈ ನಾಗಪ್ಪ : ಅವರ ಎರಡನೇ ಪ್ರಶ್ನೆ ಸೇರದೇ ಯಾವ ಪ್ರವರ್ಗಕ್ಕೆ ಸೇರಿಸಲಾಗುವುದು ಎಂದು ಕೇಳಿದ್ದಾರೆ ಅದಕ್ಕೇ ಹಾಗೆ ನಾನು ಉತ್ತರ ಕೊಟ್ಟಿದ್ದೇನೆ. ಅದು ಎಸ್‌ಸಿ ಜನಾಂಗಕ್ಕೆ ಸೇರದಿದ್ದ ಮೇಲೆ ಪ್ರವರ್ಗ Iಕ್ಕೆ ಸೇರುತ್ತದೆಂದು ಹೇಳಿದ್ದೇನೆ. ಈಗಲೂ ಪ್ರವರ್ಗ Iರಲ್ಲೇ ಇದೆ.

ಶ್ರೀ ವಾಟಾಳ್ ನಾಗರಾಜ್ : ನಾಯಕ ಮತ್ತು ಪರಿವಾರ ಜನಾಂಗವನ್ನು ಪರಿಶಿಷ್ಟ ಪಟ್ಟಿಗೆ ಸೇರಿಸಬೇಕೆಂದು ಹತ್ತಾರು ವರ್ಷದಿಂದ ಅವರು ಹೋರಾಟ ಮಾಡುತ್ತಿದ್ದಾರೆ. ದೆಹಲಿಗೆ ನೂರಾರು ನಿಯೋಗ ಹೋದರು, ಸೀತಾರಾಮ ಕೇಸರಿ ಇದ್ದಾಗ ಅನೇಕ ಸಾರಿ ಬೇಡಿಕೆ ಕೊಟ್ಟರು, ಪ್ರಧಾನಮಂತ್ರಿ ರಾಷ್ಟ್ರಪತಿಗಳನ್ನು ಕಂಡರು. ಆ ಜನಾಂಗವನ್ನು ಕಡೆಗಣಿಸಲಾಗಿದೆ, ಕರ್ನಾಟಕದಲ್ಲಿ ಪರಿಶಿಷ್ಟ ಜಾತಿಗೆ ಸೇರಿಸಬೇಕು ಅಂತ ನಿರಂತರವಾಗಿ ಒತ್ತಾಯ ಇದೆ. ಪ್ರಾಮಾಣಿಕವಾಗಿ ನೀವು ಕೇಂದ್ರದ ಜೊತೆಯಲ್ಲಿ ಮಾತನಾಡುತ್ತೀರಾ ಅಥವಾ ರಾಷ್ಟ್ರಪತಿಗಳನ್ನು ಭೇಟಿ ಮಾಡುತ್ತೀರಾ? ಪ್ರಧಾನಮಂತ್ರಿಗಳನ್ನು ಭೇಟಿ ಮಾಡುತ್ತೀರಾ? ಮನವಿ ಸಲ್ಲಿಸುತ್ತೀರಾ? ಇದರ ಬಗ್ಗೆ ಸ್ಪಷ್ಟವಾಗಿ ಹೇಳಬೇಕು.

ಡಾ. ವೈ ನಾಗಪ್ಪ : ನೀವು ಪ್ರಶ್ನೆ ಕೇಳಿರುವುದೇನು? ಪ್ರಶ್ನೆಗೆ ತಕ್ಕಂತೆ ನಾನು ಉತ್ತರ ಹೇಳಿದ್ದೇನೆ. ಇದು ಯಾಕೆ ಲಿಸ್ಟ್‌ಗೆ ಸೇರಿಲ್ಲ ಅಂತ ಕೇಳಿದ್ದರೆ ಅದಕ್ಕೆ ಉತ್ತರ ಹೇಳುತ್ತಿದ್ದೆ.

ಶ್ರೀ ಜೆ. ಸಿ. ಮಾಧುಸ್ವಾಮಿ : ಅವರು ಎಸ್‌ಟಿಯಲ್ಲೇ ಈಗಾಗಲೇ ಇದ್ದಾರೆ. ನಾಯಕ ಜನಾಂಗದ ಪರಿವಾರದವರು ಯಾಕೆ ಎಸ್‌ಸಿಗೆ ಸೇರಿಲ್ಲ ಅಂತ ಹೇಳಿ. ಉಪಾಧ್ಯಕ್ಷರೇ, ನಿಮಗೂ ಇದು ಗೊತ್ತಿದೆಯಲ್ಲಾ.

ಡಾ. ವೈ ನಾಗಪ್ಪ : ಇದು ನಾಯಕ ಪರಿವಾರದ ಬಗ್ಗೆ ಅವರು ಕೇಳಿರುವುದು. ನಾಯಕ ಪರಿವಾರ ಸಧ್ಯ ಪ್ರವರ್ಗ–1 ರಲ್ಲಿದೆ ಎಂದು ನಾನು ಹೇಳಿದ್ದೇನೆ.

ಶ್ರೀ ಗೋವಿಂದ ಎಂ. ಕಾರಜೋಳ : ಅವರನ್ನು ಸೇರಿಸುವುದಕ್ಕೆ ಸರ್ಕಾರ ಏನು ಕ್ರಮ ತೆಗೆದುಕೊಳ್ಳುತ್ತದೆ ಎನ್ನುವುದನ್ನು ಹೇಳಬೇಕು. ನಮ್ಮದು ಒತ್ತಾಯ ಏನೆಂದರೆ ನಾಯಕ ಪರಿವಾರದವರನ್ನು ಷೆಡ್ಯೂಲ್ಡ್ ಟ್ರೈಬ್‌ಗೆ ದಯಮಾಡಿ ಸೇರಿಸಬೇಕು.

ಡಾ. ವೈ ನಾಗಪ್ಪ : ದಯಮಾಡಿ ಕ್ಷಮಿಸಬೇಕು. ಎರಡನೇ ಪ್ರಶ್ನೆಯಲ್ಲಿ ಸೇರದೆ ಇದ್ದಲ್ಲಿ ಅವರನ್ನು ಯಾವ ಪ್ರವರ್ಗಕ್ಕೆ ಸೇರಿಸುತ್ತೀರಿ ಎಂದು ಕೇಳಿದ್ದೀರಿ. ತಾವು ಅದನ್ನು ಏಕೆ ಸೇರಿಸಿಲ್ಲ ಎಂದರೆ ನಾನು ಅದಕ್ಕೆ ಉತ್ತರವನ್ನು ಹೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಉಪಾಧ್ಯಕ್ಷರೇ, ನಾಯಕ ಪರಿವಾರ ಜನಾಂಗವನ್ನು ಎಸ್‌ಟಿ ಗೆ ಯಾವಾಗ ಸೇರಿಸುತ್ತೀರಿ? ಪರಿಶಿಷ್ಟ ಜನಾಂಗಕ್ಕೆ ಸೇರಿಸುವುದಕ್ಕೆ ನೀವು ಸರ್ಕಾರ ಕೇಂದ್ರದ ಜೊತೆಯಲ್ಲಿ ಮಾತನಾಡುತ್ತೀರಾ? ಕೇಂದ್ರಕ್ಕೆ ನಿಯೋಗ ಹೋಗುತ್ತೀರಾ? ಏನು ಮಾಡುತ್ತೀರಿ ಎನ್ನುವುದನ್ನು ದಯವಿಟ್ಟು ಹೇಳಿ. ಎಷ್ಟು ವರ್ಷದಿಂದ ಅವರು ತುಳಿತಕ್ಕೆ ಸಿಕ್ಕಿದ್ದಾರೆ ಆ ಜನಾಂಗದ ಬಗ್ಗೆ ಬರೀ ಮೊಸಳೆ ಕಣ್ಣೀರನ್ನು ಸುರಿಸುವುದು ಬೇಡ. ನಿರ್ಣಯಗಳಾಯಿತು. ಸಮ್ಮೇಳನಗಳಾಯಿತು. ಒತ್ತಡ ಆಯಿತು. ಅನೇಕ ಸರ್ಕಾರಗಳು ಬಂದು ಎಲ್ಲಾ ಸರ್ಕಾರಗಳು ಅವರ ಬಗ್ಗೆ ಮಾತನಾಡುತ್ತಿದ್ದೀರಿ. ಏನು ಮಾಡಿದ್ದೀರಿ ಎಂಬುದನ್ನು ತಾವು ಹೇಳಬೇಕು.

ಡಾ. ವೈ. ನಾಗಪ್ಪ : ಮಾನ್ಯ ಉಪಾಧ್ಯಕ್ಷರೇ, ನಾನು ಈ ಇಲಾಖೆಯನ್ನು ವಹಿಸಿಕೊಂಡ ಮೇಲೆ ಇದರ ಬಗ್ಗೆ ಚರ್ಚೆ ಅಥವಾ ಯಾವುದೇ ನೋಟ್ ಆಗಲಿ ಬಂದಿಲ್ಲ. ಬಹುಶಃ ಹಿಂದೆ ಏನಾದರೂ ಅದನ್ನು ಪರಿಶೀಲನೆ ಮಾಡಿ ಕೇಂದ್ರ ಸರ್ಕಾರಕ್ಕೆ ಕಳುಹಿಸಿದ್ದಾರೇನೊ ಎಂದು ನಾನು ವಿಚಾರವನ್ನು ಮಾಡುತ್ತೇನೆ. ಕಳುಹಿಸದಿದ್ದರೆ ಅದನ್ನು ನೋಟ್ ಕೊಟ್ಟು ಕ್ಯಾಬಿನೆಟ್‌ಗೆ ಇಟ್ಟು ಅದನ್ನು ನಾನು ಕಳುಹಿಸುವುದಕ್ಕೆ ವ್ಯವಸ್ಥೆಯನ್ನು ಮಾಡುತ್ತೇನೆ.

ಶ್ರೀ ಗೋವಿಂದ ಎಂ. ಕಾರಜೋಳ : ಸುಳ್ಳು ಸರ್ಟಿಫಿಕೇಟುಗಳನ್ನು ನೀಡಿ ಸೇವೆಗೆ ನೇಮಕಗೊಂಡವರು, ಬಡ್ತಿ ಹೊಂದಿದವರು ಇನ್ನೂ ಅನೇಕರು ಕೆಲವರು ಮೆಡಿಕಲ್ ಸೀಟನ್ನು ತೆಗೆದುಕೊಂಡಿದ್ದಾರೆ. ಇಂಜಿನಿಯರಿಂಗ್ ಸೀಟನ್ನು ತೆಗೆದುಕೊಂಡಿದ್ದಾರೆ. ಅವರ ವಿರುದ್ಧ ಸರ್ಕಾರವೇನು ಕ್ರಮವನ್ನು ತೆಗೆದುಕೊಂಡಿದೆ? ಮತ್ತು ಅವರನ್ನೇನಾದರೂ ಸೇವೆಯಿಂದ ವಜಾ ಮಾಡುತ್ತೀರಾ? ಜೈಲಿಗೆ ಕಳುಹಿಸುತ್ತೀರಾ ಅಥವಾ ಸುಳ್ಳು ಸರ್ಟಿಫಿಕೇಟ್ ತೆಗೆದುಕೊಂಡು ಇವತ್ತೇನು ಡಾಕ್ಟರ್, ಇಂಜಿನಿಯರುಗಳಾಗಿದ್ದಾರೆ, ಅವರ ಮೇಲೆ ಏನು ಕ್ರಮವನ್ನು ತೆಗೆದುಕೊಳ್ಳುತ್ತೀರಿ?

ಡಾ. ವೈ. ನಾಗಪ್ಪ : ಮಾನ್ಯ ಉಪಾಧ್ಯಕ್ಷರೇ, ಈಗಾಗಲೇ ಸುಳ್ಳು ಸರ್ಟಿಫಿಕೇಟುಗಳನ್ನು ತೆಗೆದುಕೊಂಡು ಬಿಇ, ಎಂಬಿಬಿಎಸ್ ಮಾಡಿರುವ ಜನರನ್ನು ಅವರಿಗೆ ನಾವು ವಾರ್ನಿಂಗನ್ನು ಕೊಟ್ಟು ಮುಂದೆ ಆ ರೀತಿ ಮಾಡಬಾರದೆಂದು ಹೇಳಿ ನಾವು ಸರ್ಕಾರಿ ಆದೇಶವನ್ನು ಹೊರಡಿಸಿದ್ದೇವೆ.

ಮತ್ತೆ ಅವರಿಗೆ ಇನ್‌ಕ್ರಿಮೆಂಟನ್ನು ಸ್ಟಾಪ್ ಮಾಡಿಬಿಟ್ಟು ಸಧ್ಯಕ್ಕೆ ಅವರನ್ನು ಜನರಲ್ ಕ್ಯಾಟಗೆರಿಗೆ ಶಿಫ್ಟ್ ಮಾಡುವುದಕ್ಕೆ ಹೇಳಿ ವ್ಯವಸ್ಥೆ ಮಾಡಿದ್ದೇವೆ. ಮತ್ತೆ ಅವರ ಮಕ್ಕಳಿಗೆ ಎಸ್‌ಟಿ ಕ್ಯಾಟಗೆರಿಗೆ ಸೇರಿಸಕೂಡದು, ಅವರಿಗೆ ಯಾವ ಸವಲತ್ತನ್ನೂ ಕೊಡಕೂಡದು ಎಂದು ಹೇಳಿ ನಾವು ಒಂದು ಆದೇಶವನ್ನು ಹೊರಡಿಸಿದ್ದೇವೆ.

ಶ್ರೀ ಗೋವಿಂದ ಎಂ. ಕಾರಜೋಳ : ಮಾನ್ಯ ಉಪಾಧ್ಯಕ್ಷರೇ, ಈ ಜನಾಂಗದವರಿಗೆ ಸಿಗಬೇಕಾದ ಸವಲತ್ತನ್ನು ಬೇರೆಯವರು ಕಸಿದುಕೊಂಡಾಗ ಅವರಿಗೆ ವಾರ್ನಿಂಗ್ ಕೊಟ್ಟಿದ್ದೇವೆ, ಇನ್ನೊಮ್ಮೆ ಮಾಡಬಾರದು ಎಂದು ಹೇಳಿದ್ದೇವೆಂದರೆ ಆ ಸಮಸ್ಯೆ ಪರಿಹಾರವಾಗುವುದಿಲ್ಲ. ಆ ಜನಾಂಗಕ್ಕೆ ಹಾನಿ ಅಯಿತಲ್ಲಾ, ಅವರಿಗೆ ಸಿಗಬೇಕಾಗಿರತಕ್ಕದ್ದನ್ನು ಬೇರೆಯವರು ಕಬಳಿಸಿದರಲ್ಲಾ, ಅದಕ್ಕಾಗಿ ನಿರ್ದಿಷ್ಟವಾಗಿ ಕಾನೂನಿನಲ್ಲಿ ಏನು ಕ್ರಮವನ್ನು ತೆಗೆದುಕೊಳ್ಳುತ್ತೀರಿ ಎನ್ನುವುದನ್ನು ಹೇಳಬೇಕಾಗುತ್ತದೆ. ಇವತ್ತು ಸಿಆರ್‌ಇ ಸೆಲ್ ಮುಂದೆ ಸಾಕಷ್ಟು ಪ್ರಕರಣಗಳು ಪೆಂಡಿಂಗ್ ಇದ್ದಾವೆ. ಅವುಗಳನ್ನೆಲ್ಲಾ ತರಿಸಿಕೊಂಡು ಅವರನ್ನು ಡಿಸ್‌ಮಿಸ್ ಮಾಡುವುದೋ, ಜೈಲಿಗೆ ಹಾಕುವುದೋ ಇವುಗಳನ್ನು ಮಾಡಿದಾಗ ಏನಾದರೂ ಸ್ವಲ್ಪ ಭಯ ಹುಟ್ಟುತ್ತದೆ. ಕಾನೂನಿನ ಅಂಜಿಕೆ ಇರುತ್ತದೆ. ಇಲ್ಲದಿದ್ದರೆ ಏನೂ ಮಾಡುವುದಕ್ಕಾಗುವುದಿಲ್ಲ. ನಾವು ವಾರ್ನಿಂಗ್ ಮಾಡುತ್ತೇವೆ. ಅವರನ್ನು ನೋಡುತ್ತೇವೆ ಎಂದು ಗದ್ದ, ತುಟಿ ಹಿಡಿದರೆ ಕೆಲಸ ಆಗುವುದಿಲ್ಲ.

ಡಾ. ವೈ. ನಾಗಪ್ಪ : ಮಾನ್ಯ ಉಪಾಧ್ಯಕ್ಷರೇ, ನಿನ್ನೆ ನಾನು ಇಲ್ಲಿ ಬಜೆಟ್ ಮೇಲೆ ಮಾತನಾಡಿದಾಗ ಅದರ ಬಗ್ಗೆ ನಾನು ಮಾತನಾಡಿದ್ದೇನೆ. ಸಿಆರ್‌ಇ ಸೆಲ್‌ನಿಂದ ನಾವು ಸುಳ್ಳು ಸರ್ಟಿಫಿಕೇಟುಗಳನ್ನು ನಾವು ತರಿಸಿದ್ದೇವೆ. ಎಷ್ಟು ಅರ್ಜಿ ಇದೆ? ಎಷ್ಟು ವಿಲೇವಾರಿಯಾಗಿದೆ? ಎಷ್ಟು ಜನರ ಮೇಲೆ ನಾವು ಕ್ರಮ ತೆಗೆದುಕೊಂಡಿದ್ದೇವೆ ಎನ್ನುವುದರ ಬಗ್ಗೆ ನಿನ್ನೆ ನಾನು ಹೇಳಿದ್ದೇನೆ. ಇದಕ್ಕೆ ನಿನ್ನೆಯೇ ನಾನು ಉತ್ತರ ಕೊಟ್ಟಿದ್ದೇನೆ.

ಶ್ರೀ ಗೋವಿಂದ ಎಂ. ಕಾರಜೋಳ : ನಾವು ಇವತ್ತು ಪ್ರಶ್ನೆ ಕೇಳುತ್ತಿದ್ದೇವೆ. ನೀವು ಬಜೆಟ್ ಮೇಲೆ ಸಾರ್ವಜನಿಕ ಭಾಷಣ ಮಾಡಿದ್ದೀರಿ. ನಾನೂ ಇದ್ದೆ. ನಿಮ್ಮ ಸಾರ್ವಜನಿಕ ಭಾಷಣ ಕೇಳಿ ನಾವೇನು ಮಾಡಬೇಕಾಗಿದೆ? ಈಗ ನಿರ್ದಿಷ್ಟವಾಗಿ ಪ್ರಶ್ನೆಯನ್ನು ಕೇಳಿದ್ದೇನೆ. ತಾವು ನಿರ್ದಿಷ್ಟವಾಗಿ ಉತ್ತರವನ್ನು ಹೇಳಬೇಕಾಗುತ್ತದೆ. ಸರ್ಕಾರ ಅವರ ಮೇಲೆ ಕ್ರಮ ತೆಗೆದುಕೊಳ್ಳವುದಕ್ಕೆ ಸಶಕ್ತವಾಗಿದೆಯೋ ಇಲ್ಲವೋ? ಸರ್ಕಾರಕ್ಕೆ ಸಿಗುವುದಿಲ್ಲವೋ ಹೇಗೆ? ಸರ್ಕಾರ ಅಷ್ಟೊಂದು ವೀಕ್ ಇದೆಯೋ ಹೇಗೆ ಎಂದು ತಾವು ಹೇಳಬೇಕಾಗುತ್ತದೆ.

ಡಾ. ವೈ. ನಾಗಪ್ಪ : ಮಾನ್ಯ ಉಪಾಧ್ಯಕ್ಷರೇ, ಖಂಡಿತಾ ನಮ್ಮ ಸರ್ಕಾರ ಸುಭದ್ರವಾಗಿದೆ. ಅದಕ್ಕೆ ಬದ್ದವಾಗಿದೆ. ನಾವು ಅದರ ಬಗ್ಗೆ ಗಮನ ಹರಿಸಿ ಆದಷ್ಟು ಬೇಗ ಕ್ರಿಮಿನಲ್ ಪ್ರೊಸೀಜರ್ ನಾವು ಅಪ್ಲೈ ಮಾಡಿ ಇವತ್ತು ಅವರ ಬಗ್ಗೆ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಬಾಗಲಕೋಟೆ ಜಿಲ್ಲೆಯಲ್ಲಿ ಕೊಳವೆ ಬಾವಿಗಳಿಗೆ ಪಂಪ್‌ಸೆಟ್ ಅಳವಡಿಸುವುದು

517 (5915) : **ಶ್ರೀ ಗೋವಿಂದ ಎಂ. ಕಾರಜೋಳ** : ಸಮಾಜ ಕಲ್ಯಾಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬಾಗಲಕೋಟೆ ಜಿಲ್ಲೆ ಮುಧೋಳ ಮತ ಕ್ಷೇತ್ರದಲ್ಲಿ ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ಕೊರೆಸಿದ ಬಾವಿಗಳಿಗೆ ಸುಮಾರು 3 ತಿಂಗಳುಗಳಿಂದ ಪಂಪ್ ಸೆಟ್‌ಗಳನ್ನು ಅಳವಡಿಸದೆ ಇರಲು ಕಾರಣವೇನು;

ಆ) ಹಾಗಿದ್ದಲ್ಲಿ; ಎಷ್ಟು ದಿನಗಳಲ್ಲಿ ಪಂಪ್‌ಸೆಟ್‌ಗಳನ್ನು ಅಳವಡಿಸಲಾಗುವುದು?

ಡಾ. ವೈ. ನಾಗಪ್ಪ (ಮಾನ್ಯ ಸಮಾಜ ಕಲ್ಯಾಣ ಸಚಿವರು) :

ಅ) ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಅಭಿವೃದ್ದಿ ನಿಗಮದ ಮೂಲಕ ಗಂಗಾ ಕಲ್ಯಾಣ ವೈಯಕ್ತಿಕ ನೀರಾವರಿ ಕೊಳವೆ ಬಾವಿ ಯೋಜನೆಯಡಿಯಲ್ಲಿ ಕೊರೆದ ಪ್ರತಿ ಕೊಳವೆ ಬಾವಿಗೆ ಸಹಾಯಧನ ಗರಿಷ್ಠ ರೂ. 65,000/– ಗಳಾಗಿದ್ದು, ಹೆಚ್ಚುವರಿ ಸಾಲ ರೂ. 10,000/– ಗಳವರೆಗೆ NSCFDC/NSTFDC ರವರಿಂದ ಅವಧಿ ಸಾಲವನ್ನಾಗಿ ಪಡೆಯುತ್ತಿದ್ದು, ಸದರಿ ಮೊತ್ತಕ್ಕೆ ಫಲಾನುಭವಿಗಳು ಅಗತ್ಯ ದಾಖಲಾತಿಗಳನ್ನು ಪಂಪ್ ಅಳವಡಿಸುವ ಮೊದಲೇ ನೀಡಬೇಕಾಗಿರುತ್ತದೆ. ಒಂದು ವೇಳೆ (ಕೊಳವೆ ಬಾವಿ ವೆಚ್ಚ ಗರಿಷ್ಠ ರೂ. 75,000/– ಗಳು ಮೀರಿದ್ದಲ್ಲಿ ಹೆಚ್ಚುವರಿ ಹಣವನ್ನು ಫಲಾನುಭವಿಗಳೇ ನೇರವಾಗಿ ಭರಿಸಬೇಕಾಗುತ್ತದೆ.

ಫಲಾನುಭವಿಗಳು ಅವಧಿ ಸಾಲದ ಭದ್ರತೆಗೆ ಅಗತ್ಯ ದಾಖಲಾತಿಗಳನ್ನು ನೀಡದೇ ಇರುವ ಹಾಗೂ ಘಟಕದ ವೆಚ್ಚ ರೂ. 75,000/– ಗಳು ಮೀರಿದ ಪ್ರಕರಣಗಳಲ್ಲಿ ಹೆಚ್ಚುವರಿ ಹಣವನ್ನು ಫಲಾನುಭವಿಗಳು ನಿಗಮಕ್ಕೆ ಪಾವತಿಸದೆ ಇರುವ ಪ್ರಯುಕ್ತ ಪಂಪ್ ಅಳವಡಿಸುವ ಕಾರ್ಯ ವಿಳಂಬವಾಗಿದೆ.

ಕರ್ನಾಟಕ ಹಿಂದುಳಿದ ವರ್ಗಗಳ ಅಬಿವೃದ್ದಿ ನಿಗಮವು ಕೊರೆಸಿದ ಕೊಳವೆ ಬಾವಿಗಳಲ್ಲಿ ಒಂದು ಕೊಳವೆ ಬಾವಿಗೆ ಮಾತ್ರ ಪಂಪ್‌ಸೆಟ್ ಅಳವಡಿಸಿರುವುದಿಲ್ಲ.

ಆ) ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಅಭಿವೃದ್ದಿ ನಿಗಮ ನಿಯಮಿತ:

2005–06ನೇ ಸಾಲಿನ ಆಗಸ್ಟ್ ಮಾಹೆಯ ಅಂತ್ಯದೊಳಗೆ ಪಂಪ್‌ಸೆಟ್ ಅಳವಡಿಸುವ ಕ್ರಮ ಕೈಗೊಳ್ಳುತ್ತಿದೆ.

ಕರ್ನಾಟಕ ಹಿಂದುಳಿದ ವರ್ಗಗಳ ಅಭಿವೃದ್ದಿ ನಿಗಮ ನಿಯಮಿತ

ಪಂಪ್ ಸೆಟ್ ಸರಬರಾಜು ಮಾಡಲು ದಿನಾಂಕ 20–06–2005 ರಂದು ಆದೇಶ ನೀಡಿದೆ. ಶೀಘ್ರದಲ್ಲೇ ಈ ಪಂಪ್‌ಸೆಟ್‌ನ್ನು ಅಳವಡಿಸಲಾಗುವುದು.